# ನಾನೂ ಒಬ್ಬ ಅಭಿಮಾನಿ..!

ನಾನು ವಿಷ್ಣುವರ್ಧನ್ ಅಲ್ಲ. ಅವರ ಒಬ್ಬ ಅಭಿಮಾನಿ ಅಷ್ಟೆ. ನಾನೊಬ್ಬನೇ ಅಭಿಮಾನಿ ಅಲ್ಲ; ಅವರಿಗೆ ನನ್ನಂತಹ ಲಕ್ಷಾನುಗಟ್ಟಳೆ ಅಭಿಮಾನಿಗಳು ಇನ್ನೂ ಬದುಕಿದ್ದಾರೆ. ಅವರಲ್ಲಿ ನಾನೊಬ್ಬ, ಅಷ್ಟೆ.."

–ಸುದೀಪ್ ಭಾವುಕರಾಗಿ ಮಾತನಾಡಿದರು.

'ವಿಷ್ಣುವರ್ಧನ' ಸಿನಿಮಾ ಭರ್ಜರಿ ಬಿಡುಗಡೆ ಕಂಡಿದೆ. ಟೈಟಲ್ ವಿವಾದದಿಂದಾಗಿ ಕಳೆದ ಕೆಲವು ತಿಂಗಳಿಂದ ಸುದ್ದಿ ಮಾಡುತ್ತಿದ್ದ ಈ ಸಿನಿಮಾ ಬಿಡುಗಡೆಯಾಗುತ್ತದೋ, ಇಲ್ಲವೋ ಎಂದು ಗಾಂಧಿನಗರದ ಪಂಡಿತರು ಅನುಮಾನ ವ್ಯಕ್ತಪಡಿಸುತ್ತಿದ್ದರು. ಆದರೆ ಪಕ್ಕಾ ವ್ಯವಹಾರಸ್ಥ ನಿರ್ಮಾಪಕ ದ್ವಾರಕೀಶ್, ಚಿತ್ರವನ್ನು ಬಿಡುಗಡೆ ಮಾಡಿದ್ದೇ ಅಲ್ಲದೆ, ರಾಜ್ಯದ ಎಲ್ಲೆಡೆಯಿಂದ ಬಾಕ್ಸಾಫೀಸ್‌ನಲ್ಲಿ ಭರ್ಜರಿ ಪ್ರತಿಕ್ರಿಯೆ ಪಡೆದಿದ್ದಾರೆ.

ಇನ್ನೊಂದೆಡೆ, ಭಾರತಿ ವಿಷ್ಣುವರ್ಧನ್ ಮತ್ತು ಅವರ ಕುಟುಂಬ ದ್ವಾರಕೀಶ್‌ರ ವಿರುದ್ಧ ಗರಂ ಆಗಿದೆ. ವಿಷ್ಣುವರ್ಧನ್ ಅವರ ಕುಟುಂಬದವರು ನಿರ್ಮಾಪಕರ ಸಂಘವನ್ನು ಮಧ್ಯೆ ನಿಲ್ಲಿಸಿ ಹಾಕಿರುವ ಷರತ್ತುಗಳನ್ನು ಉಲ್ಲಂಘಿಸಿ ದ್ವಾರಕೀಶ್ ದ್ರೋಹ ಮಾಡಿದ್ದಾರೆ ಎಂಬ ಆರೋಪಗಳೂ ಕೇಳಿಬಂದಿವೆ. ಸಿನಿಮಾ ಬಿಡುಗಡೆಯಾದ ಮೊದಲ ದಿನ ಅಭಿಮಾನಿಗಳ ಸಂಭ್ರಮ, ಪತ್ರಕರ್ತರ ಗುಸುಗುಸು, ವಿವಾದದ ಹೊಗೆಯ ಮಧ್ಯೆಯೇ ಸುದೀಪ್ 'ಚಿತ್ರಸುಧಾ' ಜತೆಗೆ ಮಾತನಾಡಿದರು.

ಸುದೀಪ್ ಅವರಿಗೆ ಕೇಳಿದ ಮೊದಲ ಪ್ರಶ್ನೆ ಅವರನ್ನು ಸಾಕಷ್ಟು ವಿಚಲಿತಗೊಳಿಸಿತ್ತು.

* ಹಿಂದೆ ಕೆಲವರು ಶಂಕರನಾಗ್ ಶೂ ಒಳಗೆ ಕಾಲು ಹಾಕಲು ಯತ್ನಿಸಿದ್ದರು. ಹಾಗೆಯೇ ನೀವು ಈಗ ವಿಷ್ಣವರ್ಧನ್‌ರ ಶೂ ಒಳಗೆ ಕಾಲು ಹಾಕಲು ಯತ್ನಿಸಿದ್ದೀರಿ, ಅಲ್ವೆ?"

ಎನ್ನುವುದೇ ಆ ಪ್ರಶ್ನೆ.

"ನಾನು ಯಾರ ಶೂ ನಲ್ಲೂ ಕಾಲು ಹಾಕಲು ಯತ್ನಿಸಿಲ್ಲ. ವಿಷ್ಣು ಸಾರ್ ಅವರ ಅಭಿಮಾನಿಯಾಗಿ ಈ ಸಿನಿಮಾದಲ್ಲಿ ನಟಿಸಿದ್ದೇನೆ. ಯಾರದ್ದಾದರೂ ಶೂ ಒಳಗೆ ಕಾಲು ತೂರಿಸುವುದಾದರೆ ಚಿತ್ರರಂಗಕ್ಕೆ ಬಂದ 16 ವರ್ಷಗಳ ಬಳಿಕ ಆ ಪ್ರಯತ್ನ ಮಾಡಬೇಕಿರಲಿಲ್ಲ. ನನ್ನ ವೃತ್ತಿಜೀವನದ ಈ ಹಂತದಲ್ಲಿ ನಾನ್ಯಾಕೆ ಬೇರೆಯವರ ಶೂ ಒಳಗೆ ಕಾಲು ಹಾಕಲಿ? ನನ್ನ ತಂದೆಯ ಶೂ ಒಳಗೇ ಕಾಲು ಹಾಕದೆ ಸ್ವತಂತ್ರವಾಗಿ ಬೆಳೆದವನು ನಾನು. ಅವರ ಶ್ರೀಮಂತಿಕೆಯನ್ನು ಬಿಟ್ಟು, ಅವರು ನಮ್ಮ ಜತೆಗಿದ್ದರೆ ಸಾಕು ಎಂದುಕೊಂಡವನು. ಈವರೆಗೆ ನಾನು ಬೆಳೆದಿರೋದು ನನ್ನತನದ ಮೇಲೆ."

"ನಾವೆಲ್ಲ ಈ ಜನರೇಶನ್ ನಟರು. ರಾಜ್ ಕುಮಾರ್, ಅಂಬಿ ಸಾರ್, ವಿಷ್ಣು ಸಾರ್ ಇವರನ್ನೆಲ್ಲ ಯಾರಾದ್ರೂ ರಿಪ್ಲೇಸ್ ಮಾಡಲು ಆಗುತ್ತದೆಯೆ? ನಾನು ಕಾಲೇಜು ದಿನಗಳಿಂದ ಇವರ ಸಿನಿಮಾಗಳನ್ನು ನೋಡಿಕೊಂಡು ಬೆಳೆದವನು. ಕಾಲೇಜು ದಿನಗಳಲ್ಲಿ ಆಸೆಯೇನೋ ಇತ್ತು. ಆದರೆ ಮುಂದೆ ಸಿನಿಮಾ ಮಾಡ್ತೀನಿ ಅನ್ನೋ ಕಲ್ಪನೇನೇ ಇರಲಿಲ್ಲ..."

* ಅಂದರೆ ಈಗ ವಿವಾದ ಎದ್ದಿರುವುದು ಏಕೆ?

"ಈ ಸಿನಿಮಾವನ್ನು ತುಂಬ ಪ್ರೀತಿಯಿಂದ, ಹೃದಯಾಂತರಾಳದಿಂದ ಮಾಡಿದೆ. ಈಗ ನೋಡಿದರೆ ಎಲ್ಲ ಕಡೆ ಆಪಾದನೆಗಳು. ಇದು ನನಗೆ ಬೇಡವಾಗಿತ್ತು ಅನ್ನಿಸ್ತಿದೆ. ನಾನು ಭಾರತೀ ಮೇಡಂ ಅವರನ್ನು ದೂರೋದಿಲ್ಲ. ಅವರ ದೃಷ್ಟಿಕೋನದಿಂದ ನೋಡಿದರೆ ಅವರ ನಿಲುವೂ ಸರಿಯಾಗಿದೆ. ಅವರಿಗೆ ಹೈದರಾಬಾದ್‌ನಲ್ಲಿ ಪ್ರಿಂಟ್ ತೋರಿಸುವುದು ನಿರ್ಧಾರವಾಗಿತ್ತು. ಆದರೆ ಪ್ರಿಂಟ್ ಕೈಗೆ ಸಿಕ್ಕಿದ್ದೇ ಬಿಡುಗಡೆಯ ಮುಂಚಿನ ದಿನ. ಇಲ್ಲಿ ಉದ್ಯಮದಲ್ಲಿ ಮಧ್ಯೆ ತಂದು ಹಾಕೋರು ಸಾಕಷ್ಟು ಜನ ಇದ್ದಾರೆ.."

* ಸುದೀಪ್ ಅಂದರೇ ವಿವಾದ ಎಂಬಂತೆ ಕಾಣಿಸುತ್ತಿದೆಯಲ್ಲ?

"ಇದೆಲ್ಲ ಇಲ್ಲಿ ಮಾತ್ರ ನಡೀತದೆ. ಹೊರರಾಜ್ಯಗಳಲ್ಲಿ ಇಂಡಸ್ಟ್ರಿಯವರು ನನಗೆ ಎಷ್ಟೊಂದು ಮರ್ಯಾದೆ ಕೊಡ್ತಾರೆ.. ಕಳೆದ 16 ವರ್ಷಗಳಿಂದ ಇಂತಹ ವಿವಾದಗಳಿಗೆ ಉತ್ತರ ಕೊಟ್ಟೂ ಕೊಟ್ಟೂ ಸಾಕಾಗಿದೆ. ನಾನು ಮಹತ್ವಾಕಾಂಕ್ಷಿ ಅಲ್ಲ. ಸಿನಿಮಾ ಮಾಡೋದು, ಅದನ್ನು ಎಂಜಾಯ್ ಮಾಡೋದು ಬಿಟ್ಟರೆ ನನಗೆ ಬೇರೆ ಕೆಲಸ ಗೊತ್ತಿಲ್ಲ. ಅದನ್ನು ನಾನು ನಿಷ್ಠೆಯಿಂದ ಮಾಡುತ್ತಿದ್ದೇನೆ. ಈ ಸಿನಿಮಾಕ್ಕೂ ಕಳೆದ ಒಂದೂವರೆ ವರ್ಷದಿಂದ ಎಷ್ಟೊಂದು ಶ್ರಮ ಹಾಕಿದ್ದೇನೆ ಅನ್ನೋದು ನನಗೇ ಗೊತ್ತು.

ಅಭಿಮಾನಿಗಳಿಗಂತೂ ಸಂತೋಷವಾಗಿದೆ''.

■ ಅಲೇಖ

